


ಸಂಗ್ರಹ: ಎಲ್.ಎಸ್. ಹೆಗಡೆ, ಪುಟ್ಟನಮನೆ
ಚಿತ್ರ : ಬಿ.ಕೆ. ಸೋಮಶೇಖರ, ಬೆಂಗಳೂರು

ಯಾವುದೇ ಲೋಹವನ್ನು ಬಂಗಾರಕ್ಕೆ ಬದಲಿಸುವ ಸಿದ್ಧಿಗೆ ಖ್ಯಾತರಾಗಿದ್ದ ಒಬ್ಬ ಸಾಧುವಿದ್ದರು. ಜನರು ದೂರದೂರದಿಂದ ಅವರ ಬಳಿ ಬರುತ್ತಿದ್ದರು ಮತ್ತು ಆ ವಿದ್ಯೆಯನ್ನು ಅವರಿಂದ ಕಲಿಯುವುದಕ್ಕಾಗಿ ತವಕಿಸುತ್ತಿದ್ದರು. ಆದರೆ ಆ ಸಾಧು ಎಲ್ಲರಿಗೂ ಒಂದೇ ಷರತ್ತು ಮುಂದಿಡುತ್ತಿದ್ದರು: “ಮೊದಲು ಹತ್ತು ವರ್ಷಗಳ ಕಾಲ ಆಶ್ರಮದಲ್ಲಿ ಇದ್ದು, ಸೇವೆ ಮಾಡಿ. ನಂತರ ತಿಳಿಸುವೆ.” ಯಾರೂ ಈ ಷರತ್ತಿಗೆ ಒಪ್ಪಿ ಉಳಿಯುತ್ತಿರಲಿಲ್ಲ.

ಒಂದು ಸಲ ಒಬ್ಬ ವ್ಯಕ್ತಿ ಇದೇ ಇಚ್ಛೆಯಿಂದ ಸಾಧುಗಳ ಬಳಿಗೆ ಬಂದನು. ಸಾಧುಗಳ ಕರಾರಿನಂತೆ ಆಶ್ರಮದಲ್ಲಿ ವಾಸ ಮಾಡಲಾರಂಭಿಸಿದ. ಆಶ್ರಮದ ಸಂಯಮದ ಜೀವನ ಮತ್ತು ಸತ್ಸಂಗ ಅವನ ಮೇಲೆ ಎಷ್ಟು ಗಾಢವಾಗಿ ಪ್ರಭಾವ ಬೀರಿತ್ತೆಂದರೆ ಹತ್ತು ವರ್ಷಗಳಲ್ಲಿ ಅವನು ಸಂಪೂರ್ಣವಾಗಿ ಪರಿವರ್ತನೆ ಹೊಂದಿ ಅಪರಿಗ್ರಹಿ ಸಂತನಾಗಿಬಿಟ್ಟ. ಹತ್ತು ವರ್ಷಗಳು ಪೂರ್ತಿಯಾದಾಗ ಸಾಧುವು ಆ ವ್ಯಕ್ತಿಯನ್ನು ಏಕಾಂತದಲ್ಲಿ ಕರೆದು ಹೇಳಿದನು—“ಬಾ. ನಿನಗೆ ಲೋಹವನ್ನು ಬಂಗಾರ ಮಾಡುವ ವಿದ್ಯೆಯನ್ನು ಹೇಳಿಕೊಡುತ್ತೇನೆ.” ಶಿಷ್ಯ ಉತ್ತರಿಸಿದ : “ಗುರುದೇವ, ಕ್ಷಮಿಸಿ. ಪುಟಕ್ಕಿಟ್ಟ ಬಂಗಾರದಂತೆ ಈಗ ನನ್ನನ್ನೇ ನಾನು ಪರಿವರ್ತಿಸಿಕೊಂಡು ಜ್ಞಾನಪ್ರಭೆಯಿಂದ ಬೆಳಗಲು ಇಚ್ಛಿಸುವೆ. ವ್ಯಸನ ಮತ್ತು ಸಂಕಟಗಳಿಗೆ ಸಿಕ್ಕಿಸುವ ಈ ಭೌತಿಕ ಬಂಗಾರವನ್ನು ತೆಗೆದುಕೊಂಡು ನಾನೇನು ಮಾಡಲಿ?”

